# <u>ನಗರಸಭಾ ಕಾರ್ಯಾಲಯ, ಮಂಡ್ಯ.</u>

ಸಂಖ್ಯೆ:ನಸಮಂ/ಆ.ಸಭೆ/19/2007–08. ದಿನಾಂಕ: 24–9–2007.

ದಿನಾಂಕ:24–9–2007ರಂದು ಬುಧವಾರ ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದಲ್ಲಿ ಮಾನ್ಯ ಆಡಳಿತಾಧಿಕಾರಿಗಳು , ನಗರಸಭೆ, ಮಂಡ್ಯರವರು ನಡೆಸಿದ ಸಭೆ ನಡವಳಿಕೆಗಳು.

| |
|---|
| **<u>ವಿಷಯ ಸಂಖ್ಯೆ:1:–</u>** ಜಿಲ್ಲಾ ಯುವಜನ ಸಮನ್ವಯ ಅಧಿಕಾರಿಗಳು, ನೆಹರು ಯುವ ಕೇಂದ್ರ, ಮಂಡ್ಯರವರ ಪತ್ರ ಸಂಖ್ಯೆ: ಎನ್‌ವೈಕೆ/ಎಂವೈಡಿ/ಕಟ್ಟಡ/07–08/158 ದಿನಾಂಕ:21–9–2007ರಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ನಗರ ಸಭಾ ವತಿಯಿಂದ ನೆಹರು ಯುವ ಕೇಂದ್ರ ನೂತನ ಕಛೇರಿ ಆವರಣದಲ್ಲಿ ನಗರಸಭೆ ವತಿಯಿಂದ ಶೌಚಾಲಯ ನಿರ್ಮಿಸಿ ಕೊಡುವಂತೆ ಕೋರಿ ಬಂದಿರುವ ಪತ್ರದ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ. |
| **<u>ತೀರ್ಮಾನ ಸಂಖ್ಯೆ:1:–</u>** 2007–08ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿಯಲ್ಲಿ ಮಂಡ್ಯ ನಗರಸಭೆ ವ್ಯಾಪ್ತಿಯ 5 (ಐದು) ಸ್ಥಳಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲು ನಿರ್ಮಿತಿ ಕೇಂದ್ರ ಮಂಡ್ಯರವರಿಗೆ ವಹಿಸಲಾಗಿದ್ದು, ಇವುಗಳ ಪೈಕಿ ನಾಲಬಂದವಾಡಿ ಕೊಳಚೆ ಪ್ರದೇಶದಲ್ಲಿ ಶೌಚಾಲಯ ನಿರ್ಮಿಸಲು ಸ್ಥಳದ ಅಭಾವ ಇರುವುದಾಗಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಮಂಡ್ಯರವರು ಪತ್ರ ಸಂಖ್ಯೆ:ಎನ್ಕೆ/78/2007–08 ದಿನಾಂಕ:21–9–2007ರ ಪತ್ರದಲ್ಲಿ ತಿಳಿಸಿರುವುದರಿಂದ , ನಾಲಬಂದವಾಡಿ ಕೊಳಚೆ ಪ್ರದೇಶದಲ್ಲಿ ಶೌಚಾಲಯ ನಿರ್ಮಿಸಲು ಸ್ಥಳ ಲಭ್ಯವಿಲ್ಲದೇ ಇರುವುದ ರಿಂದ ಈ ಕಾಮಗಾರಿಯನ್ನು ನೆಹರು ಯುವ ಕೇಂದ್ರದ ನೂತನ ಕಛೇರಿ ಆವರಣದಲ್ಲಿ ಶೌಚಾಲಯವನ್ನು ನಿರ್ಮಿಸಲು ಒಪ್ಪಲಾಯಿತು. |

ಸಹಿ:
ಆಡಳಿತಾಧಿಕಾರಿಗಳು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.